

ಕುಟುಂಬದ ಸಂರಚನೆ ಸಂಪೂರ್ಣವಾಗಿ ಬದಲಾಗುತ್ತಿರುವ ಕಾಲಘಟ್ಟ ಇದು. ಮನೆತುಂಬ ಮಕ್ಕಳಾಡುತ್ತಿದ್ದರೆ ಚೆನ್ನ ಎನ್ನುವ ಮಾತು ಮುಗಿದು, 'ನಾವಿಬ್ಬರು ನಮಗಿಬ್ಬರು' ಎಂಬ ವ್ಯಾಖ್ಯಾನವೂ ಹಳತಾಗಿ, ಈಗ ಅದಕ್ಕಿಂತ ಇನ್ನೊಂದು ಹೆಜ್ಜೆ ಮುಂದೆ ಇಟ್ಟು, 'ಒಂದೇ ಮಗು ಸಾಕು' ಎಂದು ಯೋಚಿಸುವವರು ಹೆಚ್ಚಾಗಿದ್ದಾರೆ. ಆದರೆ, ಒಂದು ಮಗು ಸಾಕು ಎನ್ನುವವರಿಗೂ ಎರಡನೇ ಮಗು ಆಗಿಬಿಡುವ 'ಆಕಸ್ಮಿಕ'ಗಳೂ ಸಾಕಷ್ಟಿವೆ. ಮೊದಲನೇ ಮಗು ಮಾಡಿಕೊಳ್ಳುವಾಗ ಇರುವಷ್ಟು 'ಪ್ಲ್ಯಾನಿಂಗ್', ಮಗುವಾದ ಮೇಲೆ ಇರುವುದಿಲ್ಲ. ಹಾಗಾಗಿಯೇ ಆಕಸ್ಮಿಕವಾಗಿ ಅನಪೇಕ್ಷಿತವಾಗಿ ಗರ್ಭಧಾರಣೆಗಳು ಆಗುತ್ತವೆ. ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಕಟ್ಟಲಾದ ಕುಟುಂಬ ವ್ಯವಸ್ಥೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರ್ತಿಸುವ ಈ ಲೇಖನ, ಎರಡನೇ ಮಗು ಮಾಡಿಕೊಳ್ಳುವ ಅಥವಾ ಮಾಡಿಕೊಳ್ಳದ ನಿರ್ಧಾರದ ಸುತ್ತಮುತ್ತಲೂ ಹಲವು ಕುತೂಹಲಕಾರಿ ಸಂಗತಿಗಳನ್ನು ಬಿಚ್ಚಿಡುತ್ತದೆ.